10

ಇಲಾಖೆ / ವಿಷಯ : DEPARTMENT / SUBJECT: ಸಂಪಾದಕೀಯ - ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ        ದಿನಾಂಕ : DATE : 14/10/20

ಕನ್ನಡಪ್ರಭ
ಸಂಪಾದಕೀಯ

# ಕೊರೋನಾ: ಅತಿ ಅಪಾಯಕಾರಿ ಘಟ್ಟಕ್ಕೆ ಪ್ರವೇಶಿಸಿದ ಕರ್ನಾಟಕ

ದೇಶಕ್ಕೆ ಕೊರೋನಾ ಕಾಲಿಟ್ಟು ಕೆಲ ತಿಂಗಳ ಕಾಲ ಸೋಂಕು ನಿಯಂತ್ರಿಸುವಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿರುವ ರಾಜ್ಯವೆಂಬ ಹೆಗ್ಗಳಿಕೆಯನ್ನು ಕರ್ನಾಟಕ ಗಳಿಸಿತ್ತು. ಲಾಕ್‌ಡೌನ್ ನಿಯಮಗಳನ್ನು ಉತ್ತಮವಾಗಿ ಪಾಲಿಸುವಲ್ಲಿ, ಸೋಂಕಿತರ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಗಳನ್ನು ಪತ್ತೆಹಚ್ಚಿ ಪರೀಕ್ಷೆ ನಡೆಸುವಲ್ಲಿ, ಸೋಂಕಿತರನ್ನು ಆಸ್ಪತ್ರೆಗೆ ಸಾಗಿಸುವಲ್ಲಿ ಮತ್ತು ಚಿಕಿತ್ಸೆ ನೀಡುವಲ್ಲಿಯೂ ರಾಜ್ಯ ಮುಂದಿತ್ತು. ಈ ಕುರಿತು ಕೇಂದ್ರ ಸರ್ಕಾರ ಪದೇಪದೇ ಮೆಚ್ಚುಗೆ ಕೂಡ ವ್ಯಕ್ತಪಡಿಸಿತ್ತು. ಆದರೆ, ಲಾಕ್‌ಡೌನ್ ಮುಗಿದ ಮೇಲೆ ಅನ್‌ಲಾಕ್ ನಿಯಮಗಳನ್ನು ಜಾರಿಗೊಳಿಸುವಲ್ಲಿಯೂ ಮೊದಲ ಸಾಲಿನಲ್ಲಿ ನಿಂತ ಕರ್ನಾಟಕ, ಆಮೇಲೆ ನಿಯಂತ್ರಣಾತ್ಮಕ ಕ್ರಮಗಳನ್ನೂ ಮುನ್ನೆಚ್ಚರಿಕೆಗಳನ್ನೂ ಕಡೆಗಣಿಸಿತು. ಪರಿಣಾಮ, ಸೋಂಕು ಹರಡುವಿಕೆ ಮತ್ತು ಸಾವಿನ ವಿಷಯದಲ್ಲಿ ಇದೀಗ ದೇಶದಲ್ಲೇ ಅತ್ಯಂತ ಅಪಾಯಕಾರಿ ಘಟ್ಟವನ್ನು ರಾಜ್ಯ ಪ್ರವೇಶಿಸಿದೆ. ದೇಶದಲ್ಲಿ ಈಗ ಅತಿಹೆಚ್ಚು ಸಕ್ರಿಯ ಕೊರೋನಾ ಸೋಂಕಿತರಿರುವ ನಗರ ಬೆಂಗಳೂರು ಆಗಿದೆ. ಅದರ ಜೊತೆಗೇ ರಾಜ್ಯದಲ್ಲಿ ಕೊರೋನಾದಿಂದ ಸಂಭವಿಸಿರುವ ಸಾವಿನ ಸಂಖ್ಯೆ 10 ಸಾವಿರವನ್ನು ದಾಟಿದೆ. ಕಳೆದ ಮೂರು ತಿಂಗಳಲ್ಲಿ ರಾಜ್ಯದಲ್ಲಿ ಪ್ರತಿದಿನ ಸರಾಸರಿ 100ಕ್ಕೂ ಹೆಚ್ಚು ಸಾವು ಸಂಭವಿಸಿದೆ. ಕೊರೋನಾದಿಂದ 10 ಸಾವಿರಕ್ಕಿಂತ ಹೆಚ್ಚು ಸಾವು ಸಂಭವಿಸಿರುವುದು ಮಹಾರಾಷ್ಟ್ರ, ತಮಿಳುನಾಡು ಮತ್ತು ಕರ್ನಾಟಕದಲ್ಲಿ ಮಾತ್ರ. ಇವೆರಡೂ ಸಂಗತಿಗಳು ಕೊರೋನಾ ಹೋರಾಟದ ವಿಷಯದಲ್ಲಿ ನಮ್ಮ ರಾಜ್ಯಕ್ಕೆ ಕಪ್ಪುಚುಕ್ಕಿಯಿದ್ದಂತೆ. ಅದಕ್ಕಿಂತ ಹೆಚ್ಚಾಗಿ, ಒಂದು ಕೋಟಿ ಜನಸಂಖ್ಯೆಯಿರುವ ಬೆಂಗಳೂರಿನಲ್ಲಿ ಕೊರೋನಾ ಇನ್ನುಮೇಲೆಯೂ ನಿಯಂತ್ರಣಕ್ಕೆ ಬರದಿದ್ದರೆ ಸೋಂಕು ಯಾವ ಪ್ರಮಾಣದಲ್ಲಿ ಹರಡಬಹುದು ಮತ್ತು ಬೆಂಗಳೂರಿನಿಂದಾಗಿ ರಾಜ್ಯದ ಇತರ ಜಿಲ್ಲೆಗಳಿಗೆ ಹೇಗೆ ಹರಡಬಹುದು ಎಂಬುದನ್ನು ಊಹಿಸಿಕೊಂಡರೆ ಯಾರಿಗಾದರೂ ಆತಂಕವಾಗಬೇಕು.

**ಅತಿಹೆಚ್ಚು ಸಕ್ರಿಯ ಸೋಂಕಿತರಿರುವ ನಗರಗಳ ಪೈಕಿ ದೇಶಕ್ಕೇ ಈಗ ಬೆಂಗಳೂರು ನಂ.1 ಆಗಿದೆ. 10 ಸಾವಿರಕ್ಕಿಂತ ಹೆಚ್ಚು ಸಾವು ಸಂಭವಿಸಿದ 3ನೇ ರಾಜ್ಯ ಕರ್ನಾಟಕವಾಗಿದೆ.**

ರಾಜ್ಯದಲ್ಲಿ ದಿನಕ್ಕೆ 1 ಲಕ್ಷಕ್ಕೂ ಹೆಚ್ಚು ಕೊರೋನಾ ಪರೀಕ್ಷೆ ನಡೆಯುತ್ತಿದೆ ಎಂಬುದನ್ನು ಬಿಟ್ಟರೆ ಸಂಪರ್ಕಿತರ ಪತ್ತೆ, ಆಸ್ಪತ್ರೆಗೆ ದಾಖಲು, ಚಿಕಿತ್ಸೆ, ಹೋಂ ಐಸೋಲೇಶನ್, ಮನೆಯಲ್ಲೇ ಚಿಕಿತ್ಸೆ, ಸೋಂಕಿತರ ಮೇಲೆ ನಿಗಾ ಹೀಗೆ ಬೇರೆಲ್ಲ ವಿಷಯಗಳಲ್ಲೂ ಸರ್ಕಾರಕ್ಕೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಿಡಿತ ತಪ್ಪಿಹೋಗಿದೆ. ಕೊರೋನಾ ಪರೀಕ್ಷೆಯ ವಿಷಯದಲ್ಲೂ ಸಾಕಷ್ಟು ಅಕ್ರಮಗಳು ನಡೆಯುತ್ತಿರುವುದನ್ನು ಜನರೇ ತಮ್ಮ ಅನುಭವಗಳ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ದಾಖಲಿಸುತ್ತಿದ್ದಾರೆ. ಟೆಲಿ ಮೆಡಿಸಿನ್ ಬಗ್ಗೆ ಈಗ ಸುದ್ದಿಯೇ ಇಲ್ಲ. ಒಟ್ಟಿನಲ್ಲಿ ಸೋಂಕಿತರ ಸಂಖ್ಯೆಯೂ, ಸಾವಿನ ಸಂಖ್ಯೆಯೂ ಹೆಚ್ಚೇ ಆಗುತ್ತಿದೆಯೇ ಹೊರತು ಕಡಿಮೆಯಂತೂ ಆಗುತ್ತಿಲ್ಲ ಎಂಬ ಸಂಗತಿ ಮಾತ್ರ ಎಲ್ಲರಿಗೂ ನಿಚ್ಚಳವಾಗಿ ಗೋಚರಿಸುತ್ತಿದೆ. ಇನ್ನುಳಿದಂತೆ ಕೊರೋನಾ ನಿರ್ವಹಣೆಯ ಬಗ್ಗೆ ಎಲ್ಲರಲ್ಲೂ ಬೇಕಾದಷ್ಟು ಪ್ರಶ್ನೆಗಳಿವೆ. ಇದು ಹೀಗೇ ಮುಂದುವರೆದರೆ ಸೋಂಕು ಮತ್ತು ಸಾವಿನ ಸಂಖ್ಯೆ ಇಳಿಕೆ ಹೇಗೆ ಸಾಧ್ಯ? ದೇಶದಲ್ಲಿ ದಿನೇದಿನೇ ಸೋಂಕು ಮತ್ತು ಸಾವು ಇಳಿಮುಖವಾಗುತ್ತಾ ಸಾಗುತ್ತಿದ್ದರೆ ಅದಕ್ಕೆ ವ್ಯತಿರಿಕ್ತ ಹಾದಿಯಲ್ಲಿ [illegible] ಇರುವುದನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಲೇಬೇಕಿದೆ. ಕೊರೋನಾ ಯುದ್ಧದಲ್ಲಿ ಕೇಂದ್ರ ಸರ್ಕಾರಕ್ಕೀಗ ಸಮಸ್ಯಾತ್ಮಕವಾಗಿ ಪರಿಣಮಿಸಿದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಮತ್ತು ಕೇರಳ ಮುಂದಿವೆ. ಇದು ರಾಜ್ಯ ಸರ್ಕಾರಕ್ಕೆ ಮುಜುಗರದ ವಿಷಯವೂ ಅಲ್ಲವೇ?

ಇಷ್ಟು ದಿನ ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ನಡುವಿನ ಗೊಂದಲ ಅಥವಾ ಸಮನ್ವಯದ ಕೊರತೆಯಿಂದಾಗಿ ಕೊರೋನಾ ನಿರ್ವಹಣೆಯಲ್ಲಿ ಸಮಸ್ಯೆಯಾಗಿತ್ತು ಎಂದು ಹೇಳುವುದಾದರೆ ಇದೀಗ ಎರಡೂ ಇಲಾಖೆಗಳಿಗೆ ಒಬ್ಬರೇ ಸಚಿವರು ನೇಮಕವಾಗಿದ್ದಾರೆ. ಅವರು ಸ್ವತಃ ವೈದ್ಯರೂ ಆಗಿರುವುದರಿಂದ ಇನ್ನುಮುಂದಾದರೂ ಸೋಂಕಿತರ ಸಂಖ್ಯೆಯನ್ನೂ, ಸಾವಿನ ಸಂಖ್ಯೆಯನ್ನೂ ಗಮನಾರ್ಹ ಪ್ರಮಾಣದಲ್ಲಿ ಇಳಿಸುವಲ್ಲಿ ರಾಜ್ಯ ಸರ್ಕಾರ ಯಶಸ್ವಿಯಾಗಬೇಕಿದೆ. ಇದು ಕೇವಲ ಅಂಕಿಅಂಶಗಳ ಕಸರತ್ತಿನಲ್ಲಿ ಕೃತಕವಾಗಿ ತೋರಿಸುವ ಪ್ರಗತಿ ಆಗಬಾರದು. ಕೊರೋನಾ ವಿಷಯದಲ್ಲಿ ಅಂಕಿಅಂಶಗಳನ್ನು ಬೇಕಾದ ಹಾಗೆ ಬಳಸಿಕೊಂಡು ಪ್ರಗತಿ ತೋರಿಸುವ ಕೆಲಸ ಈಗಾಗಲೇ ಬೇಕಾದಷ್ಟಾಗಿದೆ. ನಿಜವಾಗಿಯೂ ಸೋಂಕಿನಿಂದ ರಾಜ್ಯವನ್ನು ಪಾರುಮಾಡುವ ದಿಸೆಯಲ್ಲಿ ಪ್ರಾಮಾಣಿಕ ಮತ್ತು ದಕ್ಷ ಪ್ರಯತ್ನ ಆಗಲೇಬೇಕಿದೆ.